**ದಿನಾಂಕ 07–03–2011 ರಂದು ಮಧ್ಯಾಹ್ನ 2:30 ಘಂಟೆಗೆ ರಾಜ್ಯದ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಾಹಿತಿ ಆಯುಕ್ತರುಗಳ ಸಭೆಯ ನಡವಳಿಗಳು**

**ಈ ಸಭೆಯಲ್ಲಿ ಉಪಸ್ಥಿತರಿದ್ದ ಆಯುಕ್ತರುಗಳು/ಅಧಿಕಾರಿಗಳು:**

1) ಶ್ರೀ ಎ.ಕೆ.ಎಂ. ನಾಯಕ್, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2) ಡಾ: ಹೆಚ್.ಎನ್. ಕೃಷ್ಣ, ರಾಜ್ಯ ಮಾಹಿತಿ ಆಯುಕ್ತರು.
3) ಶ್ರೀ ಜೆ.ಎಸ್.ವಿರೂಪಾಕ್ಷಯ್ಯ, ರಾಜ್ಯ ಮಾಹಿತಿ ಆಯುಕ್ತರು.
4) ಶ್ರೀ ಡಿ. ತಂಗರಾಜ್, ರಾಜ್ಯ ಮಾಹಿತಿ ಆಯುಕ್ತರು.
5) ಶ್ರೀ ಎಂ.ಆರ್.ಪೂಜಾರ್, ರಾಜ್ಯ ಮಾಹಿತಿ ಆಯುಕ್ತರು.
6) ಶ್ರೀ ಟಿ. ರಾಮ ನಾಯ್ಕ್, ರಾಜ್ಯ ಮಾಹಿತಿ ಆಯುಕ್ತರು.
7) ಡಾ: ಶೇಖರ್ ಡಿ. ಸಜ್ಜನರ್, ರಾಜ್ಯ ಮಾಹಿತಿ ಆಯುಕ್ತರು.
8) ಶ್ರೀ ಬಿ.ಎ. ನಾಗೇಶ್, ಕಾರ್ಯದರ್ಶಿಗಳು.
9) ಶ್ರೀ ಬಿ. ಶ್ರೀರಾಮ ರೆಡ್ಡಿ, ಕಾನೂನು ಅಧಿಕಾರಿಗಳು.
10) ಶ್ರೀ ಹೆಚ್. ಅನಂತ ಕುಮಾರ್, ಶಾಖಾಧಿಕಾರಿಗಳು.

**ವಿಷಯ–1** ರಾಜ್ಯ ಮಾಹಿತಿ ಆಯುಕ್ತರುಗಳಿಗೆ ಮತ್ತು ನ್ಯಾಯಾಂಗ ಸಭಾಂಗಣಗಳಿಗೆ, ಗಣಕಯಂತ್ರ, ಪ್ರಿಂಟರ್, ಲ್ಯಾಪ್‌ಟಾಪ್ ಮತ್ತು ಯು.ಪಿ.ಎಸ್.ಗಳನ್ನು ಇ–ಆಡಳಿತ ಮುಖಾಂತರ ಪಡೆಯುವ ಬಗ್ಗೆ.

ದಿನಾಂಕ 11–02–2011ರ ಆಯೋಗದ ಸಭೆಯಲ್ಲಿ ಆಯುಕ್ತರುಗಳಿಗೆ ಮತ್ತು ನ್ಯಾಯಾಂಗಗಳಿಗೆ ಬೇಕಾಗಿರುವ ಗಣಕಯಂತ್ರ ಉಪಕರಣಗಳ ಪಟ್ಟಿಯನ್ನು ಇ–ಆಡಳಿತ ಇಲಾಖೆಗೆ ಸಲ್ಲಿಸಲು ತೀರ್ಮಾನಿಸಲಾಯಿತು. ದಿನಾಂಕ 07–03–2011ರ ಸಭೆಯಲ್ಲಿ ಇ–ಆಡಳಿತ ಇಲಾಖೆ ಸಲ್ಲಿಸಿರುವ ಅಂದಾಜು ವೆಚ್ಚವನ್ನು ಪರಿಶೀಲಿಸಲಾಯಿತು. ಇ–ಆಡಳಿತ ಸಲ್ಲಿಸಿರುವ ಅಂದಾಜು ಮೊತ್ತ ರೂ.19.65 ಲಕ್ಷಗಳಿಗೆ ಅನುಮೋದನೆ ನೀಡಲಾಯಿತು. ಆಯೋಗಕ್ಕೆ ಬಿಡುಗಡೆಯಾಗಿರುವ ಯಂತ್ರೋಪಕರಣ ಮತ್ತು ಸಾಮಾಗ್ರಿಗಳ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪಾವತಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ–2** ವಿವಿಧ ನ್ಯಾಯಾಂಗಣಗಳಿಗೆ ಹಾಗು ಮಿಥಿಕ್ ಸೊಸೈಟಿಯಲ್ಲಿ ವಿ.ಸಿ. ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

ವಿವಿಧ ನ್ಯಾಯಾಂಗಣಗಳಿಗೆ ಹಾಗು ಮಿಥಿಕ್ ಸೊಸೈಟಿಯಲ್ಲಿ ವಿ.ಸಿ. ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಇ–ಆಡಳಿತ ಇಲಾಖೆಯಿಂದ ಬಂದಿರುವ ಅಂದಾಜು ಮೊತ್ತವನ್ನು ಪರಿಶೀಲಿಸಲಾಯಿತು. 2010–11ನೇ ಸಾಲಿನಲ್ಲಿ ಪೀಠೋಪಕರಣ ಮತ್ತು ಸಾಮಾಗ್ರಿಗಳನ್ನು ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸಾಕಷ್ಟು ಅನುದಾನ ಲಭ್ಯವಿಲ್ಲದ ಕಾರಣ ಇದನ್ನು 2011–12ನೇ ಸಾಲಿನಲ್ಲಿ ಪರಿಗಣಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ–3** ನ್ಯಾಯಾಂಗ ಶಾಖೆಯಲ್ಲಿ ಹೊಸ ನಮೂನೆಗಳು/ವಹಿಗಳು ಅಳವಡಿಸುವ ಬಗ್ಗೆ.

ನ್ಯಾಯಾಂಗ ಶಾಖೆಯಲ್ಲಿ ಹೊಸ ನಮೂನೆಗಳು/ವಹಿಗಳು ಅಳವಡಿಸುವ ಬಗ್ಗೆ ಕಾನೂನು ಅಧಿಕಾರಿಗಳು ಸಲ್ಲಿಸಿರುವ ನಮೂನೆಗಳನ್ನು ಪರಿಶೀಲಿಸಲಾಯಿತು. ಈ ನಮೂನೆಗಳು ಮತ್ತು ಆಯುಕ್ತರುಗಳ ಶಾಖೆ/ನ್ಯಾಯಾಂಗಗಳಲ್ಲಿ ಅಳವಡಿಸ ಬೇಕಾಗಿರುವ ವಹಿಗಳನ್ನು 01–04–2011 ರಿಂದ ಹಲವು ಮಾರ್ಪಾಡುಗಳೊಂದಿಗೆ ಜಾರಿಗೊಳಿಸಲು ತೀರ್ಮಾನಿಸಲಾಯಿತು.

**ವಿಷಯ–4** ಜಿ.ಆರ್.ಆರ್‌ರಲ್ಲಿ ಸಂಗ್ರಹಿಸಿರುವ ಮಾಹಿತಿಯ ಆಧಾರದ ಮೇಲೆ Petitioner ಗಳ ವಿಳಾಸದ ಆಧಾರದ ಮೇಲೆ ಇಲಾಖವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ಸಿದ್ಧಪಡಿಸಿ ಪ್ರಕರಣಗಳ ವಿಲೇವಾರಿ ಬಗ್ಗೆ.

ಜಿ.ಆರ್.ಆರ್‌ರಲ್ಲಿ ಸಂಗ್ರಹಿಸಿರುವ ಮಾಹಿತಿಯ ಆಧಾರದ ಮೇಲೆ Petitioner ಗಳ ವಿಳಾಸದ ಆಧಾರದ ಮೇಲೆ ಇಲಾಖವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ಸಿದ್ಧಪಡಿಸಿ ಪ್ರಕರಣಗಳ ವಿಲೇವಾರಿ ಬಗ್ಗೆ ಜಿಲ್ಲಾವಾರು ಪ್ರಕರಣಗಳ ದಾಖಲಾತಿಯನ್ನು, ಮುಂದೂಡಿದ ಪ್ರಕರಣಗಳ ಮತ್ತು ಹೊಸ ಪ್ರಕರಣಗಳು ಪರಿಶೀಲಿಸಲಾಯಿತು.

ಆಯೋಗವು ಆಯುಕ್ತರುಗಳಿಗೆ ಪ್ರಕರಣಗಳ ವಿಲೇವಾರಿಗೆ ಜಿಲ್ಲೆಯ ಹಂಚಿಕೆಯನ್ನು ಈ ಕೆಳಕಂಡಂತೆ ಮಾಡಲು ತೀರ್ಮಾನಿಸಲಾಯಿತು.

| | | |
|---|---|---|
| 1. ರಾಜ್ಯ ಮುಖ್ಯ ಮಾಹಿತಿ ಆಯುಕ್ತರು | – | ಮಂಡ್ಯ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆ. |
| 2. ರಾಜ್ಯ ಮಾಹಿತಿ ಆಯುಕ್ತರು (ಡಾ: ಹೆಚ್.ಎನ್.ಕೆ) | – | ಮೈಸೂರು, ಕೊಡಗು, ಚಿಕ್ಕಮಗಳೂರು ಮತ್ತು ಕೋಲಾರ ಜಿಲ್ಲೆ. |
| 3. ರಾಜ್ಯ ಮಾಹಿತಿ ಆಯುಕ್ತರು (ಜೆ.ಎಸ್.ವಿ.) | – | ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಮತ್ತು ಉಡುಪಿ. |
| 4. ರಾಜ್ಯ ಮಾಹಿತಿ ಆಯುಕ್ತರು (ಡಿ.ಟಿ.ಆರ್) | – | ಬೀದರ್, ಗುಲ್ಬರ್ಗಾ, ಯಾದಗೀರಿ, ಹಾಸನ್ ಮತ್ತು ತುಮಕೂರು. |

5. ರಾಜ್ಯ ಮಾಹಿತಿ ಆಯುಕ್ತರು (ಎಂ.ಆರ್.ಪಿ.) – ಬಳ್ಳಾರಿ, ರಾಯಚೂರು, ಚಾಮರಾಜನಗರ ಮತ್ತು ಬೆಳಗಾಂ.

6. ರಾಜ್ಯ ಮಾಹಿತಿ ಆಯುಕ್ತರು (ಟಿ.ರಾ.ನಾ) – ಚಿತ್ರದುರ್ಗ, ದಾವಣಗೆರೆ, ಗದಗ್ ಮತ್ತು ಹಾವೇರಿ.

7. ರಾಜ್ಯ ಮಾಹಿತಿ ಆಯುಕ್ತರು (ಎಸ್.ಡಿ.ಎಸ್.) – ಬಾಗಲಕೋಟೆ, ಬಿಜಾಪುರ, ಕೊಪ್ಪಳ, ಧಾರವಾಡ.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ ಇಲಾಖವಾರು ಮಾಹಿತಿಯನ್ನು ತಯಾರಿಸಿ ಆದಷ್ಟು ಬೇಗನೆ ಮುಂದಿನ ಸಭೆಯಲ್ಲಿ ಇಡಲು ಸೂಚಿಸಲಾಯಿತು.

**ವಿಷಯ–5** ಆಯೋಗದ ವಿವಿಧ ಶಾಖೆಗಳಿಗೆ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸುವ ಬಗ್ಗೆ.

ಆಯೋಗದ ವಿವಿಧ ಶಾಖೆಗಳಿಗೆ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸುವ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಮೊದಲನೇ ಹಂತದಲ್ಲಿ ಆಯುಕ್ತರುಗಳ ಶಾಖೆಗೆ ಪ್ರಸ್ತಾಪಿಸಿರುವ ಹುದ್ದೆಗಳ, ಮಿಥಿಕ್ ಸೊಸೈಟಿಗೆ ಬೇಕಾಗಿರುವ ಹುದ್ದೆಗಳು ಮತ್ತು ಕಛೇರಿಗೆ/ನ್ಯಾಯಾಂಗ ಶಾಖೆಗೆ ಬೇಕಾಗಿರುವ ಹುದ್ದೆಗಳನ್ನು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

**ವಿಷಯ–6** ಮಿಥಿಕ್ ಸೊಸೈಟಿಯ ಕಟ್ಟಡದಲ್ಲಿ 4 ಹೊಸ ದೂರವಾಣಿಗಳನ್ನು ಸ್ಥಾಪಿಸುವ ಬಗ್ಗೆ.

ಮಿಥಿಕ್ ಸೊಸೈಟಿಯ ಕಟ್ಟಡದಲ್ಲಿ 4 ಹೊಸ ದೂರವಾಣಿಗಳನ್ನು ಸ್ಥಾಪಿಸುವ ಬಗ್ಗೆ ಅನುಮೋದಿಸಲಾಯಿತು.

**ವಿಷಯ–7** ಇತರೆ ವಿಷಯಗಳು.

1. ಆಯೋಗದಲ್ಲಿ ಬಾಕಿ ಇರುವ ಸುಮಾರು 14,000/– ಪ್ರಕರಣಗಳ ವಿಲೇವಾರಿಗೆ ಸಂಬಂಧಿಸಿದಂತೆ ಪ್ರತಿ ಆಯುಕ್ತರುಗಳಿಗೆ 2,000/– ಪ್ರಕರಣಗಳನ್ನು ಆಯ್ಕೆ ಮಾಡಿಕೊಂಡು, ಕಾನೂನು ಅಧಿಕಾರಿಯವರು ಸೂಚಿಸುವ ನಮೂನೆಯೊಂದಿಗೆ ಅರ್ಜಿಯ ಪ್ರತಿವಾದಿಗಳಿಗೆ ಕಳುಹಿಸಿ 30 ದಿನಗೊಳಗಾಗಿ ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸಬಹುದು ಮತ್ತು ಈ ಕಾರ್ಯವನ್ನು ಹೊರ ಗುತ್ತಿಗೆ ಆಧಾರದ ಮೇರೆಗೆ ಕೈಗೊಳ್ಳುವುದು ಎಂದು ತೀರ್ಮಾನಿಸಲಾಯಿತು.

2. ದಿನಾಂಕ 11–02–2011ರ ಸಭೆಯಲ್ಲಿ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದಿಂದ ಪೀಠೋಪಕರಣ ಪಡೆಯುವಂತೆ ನಿರ್ಧರಿಸಲಾಯಿತು. ತುರ್ತಾಗಿ ಮಿಥಿಕ್ ಸೊಸೈಟಿಯಲ್ಲಿ ನಿರ್ಮಾಣವಾಗಿರುವ ಆಯುಕ್ತರ ಕೊಠಡಿ ಮತ್ತು ನ್ಯಾಯಾಂಗಗಳಿಗೆ ಪೀಠೋಪಕರಣ ಸರಬರಾಜು ಮಾಡಬೇಕಾಗಿರುವುದರಿಂದ ಲೋಕೋಪಯೋಗಿ ಇಲಾಖೆ ವತಿಯಿಂದ ಸದರಿ ಕಾರ್ಯವನ್ನು ಕೈಗೊಳ್ಳುವಂತೆ ತೀರ್ಮಾನಿಸಲಾಯಿತು. ಈಗಾಗಲೇ ಪ್ರಧಾನ ಕಾರ್ಯದರ್ಶಿ, ಸಿ.ಆ.ಸು.ಇ.(ಜನಸ್ಪಂದನಕೋಶ) ಇವರಿಗೆ ರೂ.10:00 ಲಕ್ಷಗಳನ್ನು ಯಂತ್ರೋಪಕರಣ ಮತ್ತು ಸಾಮಾಗ್ರಿ ಲೆಕ್ಕ ಶೀರ್ಷಿಕೆಯಿಂದ ಸಾಮಾನ್ಯ ವೆಚ್ಚಕ್ಕೆ re-appropriate ಮಾಡಿ ಅನುಮೋದನೆ ನೀಡುವಂತೆ ಕೋರಲು ತೀರ್ಮಾನಿಸಲಾಯಿತು.

(ಎ.ಕೆ.ಎಂ. ನಾಯಕ್)
ರಾಜ್ಯ ಮುಖ್ಯ ಮಾಹಿತಿ ಆಯುಕ್ತರು

(ಡಾ: ಹೆಚ್.ಎನ್. ಕೃಷ್ಣ)
ರಾಜ್ಯ ಮಾಹಿತಿ ಆಯುಕ್ತರು

(ಜೆ.ಎಸ್.ವಿರೂಪಾಕ್ಷಯ್ಯ)
ರಾಜ್ಯ ಮಾಹಿತಿ ಆಯುಕ್ತರು

(ಡಿ. ತಂಗರಾಜ್)
ರಾಜ್ಯ ಮಾಹಿತಿ ಆಯುಕ್ತರು

(ಎಂ.ಆರ್.ಪೂಜಾರ್)
ರಾಜ್ಯ ಮಾಹಿತಿ ಆಯುಕ್ತರು

(ಟಿ. ರಾಮ ನಾಯ್ಕ್)
ರಾಜ್ಯ ಮಾಹಿತಿ ಆಯುಕ್ತರು

(ಡಾ: ಶೇಖರ್ ಡಿ. ಸಜ್ಜನರ್)
ರಾಜ್ಯ ಮಾಹಿತಿ ಆಯುಕ್ತರು

7/3/2011
(JSVSIC)